ಪಿ.ಜಿ. ರಾಜ್, ಶಿವಮೊಗ್ಗ
*ಹೆಂಡತಿ ಬಸುರಿ ಆದರೆ ಗಂಡ ಏಕೆ ಗಡ್ಡ ಬಿಡುತ್ತಾನೆ?*



ಟೆಸ್ಟು, ಸ್ಕ್ಯಾನು, ಸಿಝೇರಿಯನ್‌ಗಳ ದೊಡ್ಡ ಬೋಳಿನ ಮುಂದೆ ಗಡ್ಡ ಬೋಳು ನಗಣ್ಯ.

ಕೆ. ರಾಮದಾಸ ಉಡುಪ, ಬೆಂಗಳೂರು
*ಕೋಡಂಗಿ, ಕಮಂಗಿ, ಎಡಬಿಡಂಗಿಗಳ ನಡುವಿನ ವ್ಯತ್ಯಾಸವೇನು?*
ಟಿವಿಯಲ್ಲಿ ಭವಿಷ್ಯ ಹೇಳುವವ ಕೋಡಂಗಿ, ಬ್ರೇಕಿಂಗ್ ನ್ಯೂಸಿನವ ಕಮಂಗಿ; ನಡುವೆ ಸಿಲುಕಿದ ವೀಕ್ಷಕ ಎಡಬಿಡಂಗಿ.

ಸರ್ವಜಿತ, ಹುಬ್ಬಳ್ಳಿ
*ದೇವರಗುಡಿಗೆ ಬ್ರಹ್ಮಚಾರಿ ರಾಹುಲ ಹೋಗುವುದು ದರ್ಶನಕ್ಕೋ, ನಿದರ್ಶನಕ್ಕೋ, ಪ್ರದರ್ಶನಕ್ಕೋ?*
ನಿನಗೆ ತಾಕತ್ತಿದ್ದರೆ ನನಗೆ ಬುದ್ಧಿ ಕರುಣಿಸು ಎಂದು ಕೇಳಲು ಇರಬಹುದೆ?

ದೀಪಾ ವಿ. ಮಹಾಲೆ, ಸಾಂಬ್ರಾಣಿ
*ರಕ್ತ ದೇವರು ಕೊಟ್ಟ ಒಂದು ವರದಾನ. ಏಕೆ?*



ಬಿಸಿಯಿದ್ದಾಗ ಅನುರಕ್ತನಾಗಲು, ತಣ್ಣಗಾದಾಗ ವಿರಕ್ತನಾಗಲು ನೆರವಾಗುವುದರಿಂದ.

ಮೆಹಬೂಬ ಶೇಖಬಡೆ, ಗೋಕಾಕ
*ಇಲ್ಲೊಬ್ಬ ತನ್ನ ವೃದ್ಧ ಪಾಲಕರಿಗೆ ಅನ್ನ ಹಾಕದೇ ಹೆಂಡತಿಗೆ ಚಿನ್ನ ತರುವೆ ಅಂತಾನಲ್ಲಾ...?*
ತಿಳಿಯಿತು. ಮಗ ಮಾವನ ಮನೆಗೆ ಬಿಕರಿಯಾಗಿಬಿಟ್ಟಿದ್ದಾನೆ. ಮಾರಿದ ವಸ್ತುವಿನ ಮೇಲೆ ನಮಗೆ ಹಕ್ಕಿರುವುದಿಲ್ಲ.

ಆರ್.ವಿ. ಯಡಹಳ್ಳಿ, ಬೀಳಗಿ
*ಕನ್ಯಾಮಣಿಗೂ, ಕರಿಮಣಿಗೂ ಇರುವ ವ್ಯತ್ಯಾಸವೇನು?*
ಕನ್ಯಾಮಣಿ ಗುಂಡುಗುಂಡಗಿದ್ದರೆ ಚೆನ್ನ; ಕರಿಮಣಿ ಗುಂಡುಗಳೊಡನಿದ್ದರೆ ಚೆನ್ನ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
*ಶ್ರೀರಾಮನ ಜೊತೆ ಸೀತೆ ಕಾಡಿಗೆ ಹೋದಂತೆ ಲಕ್ಷ್ಮಣನ ಜೊತೆ ಊರ್ಮಿಳೆ ಏಕೆ ಹೋಗಲಿಲ್ಲ?*
ಓರಗಿತ್ತಿಯರು ಬೇರೆಬೇರೆ ಇದ್ದರೆ ಕಿರಿಕಿರಿ ಕಡಿಮೆ ಎಂದು ತಿಳಿದಿದ್ದಳಂತೆ.

ಗಂಜಾಂ ನಾಗರಾಜ, ಮೈಸೂರು
*ಭಾರ್ಯಾ ರೂಪವತಿ ಶತ್ರುಃ ಎಂದು ತಿಳಿದೂ ಸುಂದರಿಯನ್ನೇ ವರಿಸಲು ಆಶಿಸುವುದೇಕೆ?*
ಸುಂದರಿಯ ಕಲ್ಪನೆಯಿಂದಲೇ ಈ ಎಲ್ಲ ತಿಳಿವಳಿಕೆ ಮಂಗಮಾಯ ಆಗುವುದರಿಂದ.

ಭಾರತಿ ಮಾನಗೆ, ಹೊನ್ನಾವರ
*ಗೋ ರಕ್ಷಣೆ ಯಾರ ಹೊಣೆ?*
ಆಯಾ ಗೋವುಗಳ ಮಾಲಕರದ್ದು.

ಹಾಡ್ಯ ಬ. ಜಯಾನಂದ, ಮೈಸೂರು
*ಹಿಂದಿನ ಬಕಾಸುರನಿಗೂ, ಈಗಿನ ಮುಕ್ಕಾಸುರರಿಗೂ ಏನು ವ್ಯತ್ಯಾಸ?*
ಈ ಪಾರಂಗತರಿಗೆ ಹೋಲಿಸಿದರೆ ಅವನು ಕೇವಲ ಎಲ್‌ಕೆಜಿ ಸ್ಟೂಡೆಂಟ್.

ಮಹಾವೀರ ಕಾಸರ, ಶಿವಮೊಗ್ಗ
*ಬೆಂಗಳೂರಲ್ಲಿ ಎಂ.ಜಿ. ರೋಡ್, ಕೆ.ಜಿ. ರೋಡ್‌ಗಳಂತೆಯೇ ಕ್ವಿಂಟಾಲ್ ರೋಡ್, ಟನ್ ರೋಡುಗಳಿವೆಯೆ?*
ಕ್ವಿಂಟಾಲ್ ಇಲ್ಲ, ಟನ್‌ಗಳಿವೆ; ಬ್ರಿನ್‌ಟನ್ ರೋಡ್, ಕನ್ನಿಂಗ್‌ಟನ್ ರೋಡ್...

ವಿ. ಹೇಮಂತ ಕುಮಾರ್, ಬೆಂಗಳೂರು
*ಕೆಲವರಿಗೆ ದರಿದ್ರ ಹೋದರೂ ದರಿದ್ರ ಬುದ್ಧಿ ಇರುತ್ತದಲ್ಲ, ಏಕೆ ಸಾರ್?*
ದರಿದ್ರ ವ್ರಣವಿದ್ದಂತೆ; ವ್ರಣ ವಾಸಿಯಾದರೂ ಕಲೆ ಉಳಿಯುವುದು ಸಹಜ.

ವಿ. ಹಮೀದ್, ವಿಟ್ಲ
*ಗಗನಸಖಿಗೂ, ಪ್ರಾಣಸಖಿಗೂ ಇರುವ ವ್ಯತ್ಯಾಸವೇನು?*
ಗಗನಸಖಿಯದು **high level**; ಪ್ರಾಣಸಖಿಯದು **Eye level**

## ಬಹುಮಾನಿತ ಪ್ರಶ್ನೆ

ಅಮರಯ್ಯ ಪತ್ರಿಮಠ, ಸುರಪುರ
*ವೇದಾಂತಿಗೂ, ವಿಜ್ಞಾನಿಗೂ ಇರುವ ವ್ಯತ್ಯಾಸವೇನು?*
ಏನೇನೂ ಇಲ್ಲ; ಇಬ್ಬರಿಗೂ ಆದಿ ತಿಳಿದಿಲ್ಲ, ಅಂತ್ಯದ ಹುಡುಕಾಟ ತಪ್ಪಿಲ್ಲ.

ಮಹಾಲಿಂಗಪ್ಪ ಗೋರಬಾಳ, ಮಾಣಿಕವಾಡಿ
*ಇತ್ತೀಚೆಗೆ ಜನರಲ್ಲಿ ಬಿಪಿ ಮತ್ತು ಷುಗರ್ ಹೆಚ್ಚಾಗುತ್ತಿರಲು ಕಾರಣವೇನು?*
ನಾಲಿಗೆಯ ಹತೋಟಿ ತಪ್ಪಿರುವುದು.

ಎಂ.ಜಿ. ಉಮಾ, ಬಳ್ಳಾರಿ
*ಭೂಮಿಯ ಸುತ್ತ ಸೂರ್ಯ, ಚಂದ್ರ ಸುತ್ತುತ್ತಾರೆ. ಪಕ್ಷಗಳ ಸುತ್ತ?*
ಕ್ಷುದ್ರ ಗ್ರಹಗಳು.

ಟಿ.ಎಂ. ಮಾನಪ್ಪ, ಶಿವಮೊಗ್ಗ
*ಚಟಕ್ಕೂ, ಚಟ್ಟಕ್ಕೂ ವ್ಯತ್ಯಾಸವೇನು?*
ಚಟ ಸ್ಟಾರ್ಟಿಂಗ್ ಪಾಯಿಂಟ್; ಚಟ್ಟ ಫಿನಿಷಿಂಗ್ ಲೈನ್.

ವಿ. ಗೋವಿಂದಾಚಾರಿ, ಮೈಸೂರು
*ಅಂಧರು ಕಣ್ಣು ಕಾಣದಿದ್ದರೂ ಕಪ್ಪು ಕನ್ನಡಕವನ್ನು ಧರಿಸುತ್ತಾರಲ್ಲಾ, ಏಕೆ?*



ಇತರರ ತಿರಸ್ಕಾರದ ದೃಷ್ಟಿಯ ಬಿಸಿ ತಾಕದಿರಲೆಂದು.

ಶಿವಸ್ವಾಮಿ ನೇನೇಕಟ್ಟೆ, ಬೆಂಗಳೂರು
*ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು; ಒಲ್ಲದ ಹೆಂಡತಿಗೆ...?*
ಕರಿಮಣಿಯೆ ಗಲ್ಲು.

ಸಿಹಿಮೊಗೆ ರಮೇಶ್, ಮೈಸೂರು
*ಇದ್ದಾಗ ಕ್ಯಾರೇ ಅನ್ನದೆ ಸತ್ತಾಗ ಪೇಪರ್‌ನಲ್ಲಿ ಫೋಟೋ ಹಾಕಿಸಿ 'ನಿಮ್ಮ ಮಾರ್ಗದರ್ಶನದಲ್ಲಿ ನಡೆಯುತ್ತೇವೆ'ನ್ನುವುದೇಕೆ?*
ಅದು ಮಾರ್ಗದರ್ಶನ ಅಲ್ಲ, **morgue** ದರ್ಶನ. ಆಗಾಗ್ಗೆ ನಿಮ್ಮ ಗೋರಿಗೆ ವಿಸಿಟ್ ಕೊಡ್ತೀವೀಂತ ಅರ್ಥ.

■ ರಾಮ್